ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

**ದೂರವಾಣಿ: 080–22212652, 22212941**

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು–560001.

ಸಂಖ್ಯೆ: ಕಾಶಿಇ/05/ಶೈ.ಮೌ/2017–18

ದಿನಾಂಕ: 16.08.2017

# "ಸುತ್ತೋಲೆ"

ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಶೈಕ್ಷಣಿಕ ಮೌಲ್ಯಮಾಪನ(Academic Audit) ನಡೆಸುವ ಬಗ್ಗೆ.

* * * * * *

ಕಾಲೇಜು ಶಿಕ್ಷಣ ಇಲಾಖೆ ಅಧ್ಯಾಪಕರ ಸಾಮರ್ಥ್ಯವರ್ದನೆ ಹಾಗೂ ಗುಣಮಟ್ಟದ ಬೋಧನೆಯ ಹಲವಾರು ಉಪಕ್ರಮಗಳನ್ನು ಹಾಕಿಕೊಂಡು ಯುಜಿಸಿ ಮಾನದಂಡಗಳ ಅನ್ವಯ ವಿದ್ಯಾರ್ಥಿಗಳಿಂದ ಅಧ್ಯಾಪಕರ ಮೌಲ್ಯಮಾಪನ ಮಾಡುವ ಕಾರ್ಯವನ್ನು ನಡೆಸಿಕೊಂಡು ಬರುತ್ತಿದೆ. ಇದರ ಜೊತೆಗೆ ಅಧ್ಯಾಪಕರ ಸ್ವಯಂ ಮೌಲ್ಯಮಾಪನ ಸಹ ಮಾಡಲಾಗುತ್ತಿದೆ. ಇದು ಬೋಧನೆ ಹಾಗು ಕಲಿಕೆಯನ್ನು ಕೊಠಡಿಯ ಒಳಗೆ ಹಾಗೂ ಹೊರಗೆ ವಿದ್ಯಾರ್ಥಿ ಕೇಂದ್ರಿತವಾಗಿರುವ ಕಾರ್ಯವಾಗಿದೆ.

ಇದಲ್ಲದೆ The University Grants Commission (UGC) regulation – "Mandatory Assessment and Accreditation of higher Educational Institutions), Regulations, 2012 ಅನ್ವಯ ಅಂಗೀಕೃತ ಮೌಲ್ಯಮಾಪನ ಸಂಸ್ಥೆಯ ಮಾನ್ಯತೆ ಪಡೆಯುವುದು ಎಲ್ಲಾ ಕಾಲೇಜುಗಳಿಗೆ ಖಡ್ಡಾಯವಾಗಿದೆ. ಇಲ್ಲಿಯವರೆಗೆ 217 ಸರಕಾರಿ ಕಾಲೇಜುಗಳು ನ್ಯಾಕ್‌ನಿಂದ ಮೌಲ್ಯಮಾಪನಕ್ಕೆ ಒಳಗಾಗಿವೆ. ಈ ಕಾಲೇಜುಗಳ ಭೇಟಿಯ ಸಂದರ್ಭದಲ್ಲಿ ಪೀರ್ ತಂಡಗಳು ಅಧ್ಯಾಪಕರ ಮೌಲ್ಯಮಾಪನ ಹಾಗು ಪಠ್ಯಕ್ರಮ, ಕೋರ್ಸು ಹಾಗು ಇತರ ವಿಷಯಗಳ ಶೈಕ್ಷಣಿಕ ಮೌಲ್ಯಮಾಪನ ಕ್ರಮಬದ್ಧವಾಗಿ ನಡೆಯುತ್ತಿಲ್ಲವೆಂದು ಬಹುತೇಕ ವರದಿಗಳಲ್ಲಿ ಪ್ರಸ್ತಾಪವಾಗಿದೆ. ಆದುದರಿಂದ ಈ ಸಾಲಿನಲ್ಲಿ ಕಾಲೇಜುಗಳ ವಿವಿಧ ಮಾನದಂಡಗಳಿಗೆ ಅಧ್ಯಾಪಕರ ಹಾಗು ಕಾಲೇಜಿನ ಶೈಕ್ಷಣಿಕ ಮೌಲ್ಯಮಾಪನ ಪಡಯುವುದು ಅತ್ಯಗತ್ಯವಾಗಿದೆ.

ಇದನ್ನು ನಿಯಮಿತವಾಗಿ ನಡೆಸುವ ಅಗತ್ಯವಿದೆ, ರಾಜ್ಯದ ಎಲ್ಲಾ ಪದವಿ ಕಾಲೇಜುಗಳ ಅಧ್ಯಾಪಕರಿಗೆ ಪ್ರತೀ ವರ್ಷ ಏಪ್ರಿಲ್ ತಿಂಗಳಿನಲ್ಲಿ ಕಡ್ಡಾಯವಾಗಿ ಸ್ವಯಂ ಶೈಕ್ಷಣಿಕ ಮೌಲ್ಯಮಾಪನ ಕೈಗೊಳ್ಳಬೇಕು. ಈ ಮೌಲ್ಯಮಾಪನವನ್ನು ಕಾಲೇಜಿನ ಆಂತರಿಕ ಗುಣಮಟ್ಟ ಭರವಸೆ ಕೋಶ, ಶಿಸ್ತು ಬದ್ಧವಾಗಿ ಮಾಡಿಸಬೇಕಾಗಿರುತ್ತದೆ.

**ಈ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಕೆಳಕಂಡ ಅಂಶಗಳನ್ನು ಗಮನಿಸಲು ಸೂಚಿಸಿದೆ.**

1. ಮೌಲ್ಯಮಾಪನದಲ್ಲಿ ಎಲ್ಲಾ ಬೋಧಕರು ಪಾಲುಗೊಳ್ಳಬೇಕು.

2. ಮೌಲ್ಯಮಾಪನ ಮಾಡಬೇಕಾಗಿರುವ ಅಧ್ಯಾಪಕರ ಹೆಸರು, ವಿಷಯ ಮತ್ತು ಬೋಧನಾ ಪತ್ರಿಕೆಯನ್ನು ಸ್ಪಷ್ಟವಾಗಿ ನಮೂದಿಸಬೇಕು.
3. ಮೌಲ್ಯಮಾಪನ ಮುಗಿದ ತಕ್ಷಣ ಸ್ವಯಂ ಮೌಲ್ಯಮಾಪನ ಮಾಡಿರುವ ನಮೂನೆಗಳನ್ನು IQAC ಯಲ್ಲಿ ಪ್ರಾಂಶುಪಾಲರು ದೃಢೀಕರಿಸಬೇಕು ಹಾಗು ಅವುಗಳನ್ನು ದಾಖಲಿಕರಿಸಬೇಕು.
4. ಕಾಲೇಜು ಶಿಕ್ಷಣ ಇಲಾಖೆ ಈ ಮೌಲ್ಯಮಾಪನದ ನಮೂನೆಗಳನ್ನು ಸೂಕ್ತವಾದ ತಜ್ಞರಿಂದ ಪರಾಮರ್ಶನೆಗೆ ಒಳಪಡಿಸಲಿದೆ. ಎಲ್ಲಾ ಮೌಲ್ಯಮಾಪನವನ್ನು ಪ್ರಾಂಶುಪಾಲರ ಉಸ್ತುವಾರಿಯಲ್ಲಿ ನಡೆಸಬೇಕು.
5. ಈ ಮೌಲ್ಯಮಾಪನದ ಕಾರ್ಯವನ್ನು ರಾಜ್ಯದ ಎಲ್ಲಾ ಕಾಲೇಜುಗಳಲ್ಲಿ ಈ ವರ್ಷ ಆಗಸ್ಟ್ ತಿಂಗಳಿನಲ್ಲಿ ನಡೆಸಲಾಗುವುದು

ಈ ಕೆಳಗಿನ ನಮೂನೆಗಳಲ್ಲಿ ಶೈಕ್ಷಣಿಕ ಮೌಲ್ಯಮಾಪನದ ಮಾದರಿಯನ್ನು ಲಗತ್ತಿಸಿದೆ. ಅಗತ್ಯವಿರುವಷ್ಟು ಪ್ರತಿಗಳನ್ನು ಮಾಡಿ ಕಾಲೇಜಿನ IQAC ವತಿಯಿಂದ ಒದಗಿಸುವುದು. ಅಗತ್ಯವಿದ್ದಲ್ಲಿ ನಮೂನೆಯ ಸಾಫ್ಟ್ ಪ್ರತಿಯನ್ನು ಒದಗಿಸಲಾಗುವುದು ಹಾಗು ಈ ನಮೂನೆಯ ಸಾಫ್ಟ್ ಪ್ರತಿಯನ್ನು ಇಲಾಖೆಯ ವೆಬ್‌ಸೈಟಿನ Download ಪೇಜಿನಿಂದ ಪಡೆದುಕೊಳ್ಳುವುದು.

ಶೈಕ್ಷಣಿಕ ಮೌಲ್ಯಮಾಪನದಲ್ಲಿ ಸಲಹೆ ಹಾಗೂ ಕೊರತೆಗಳಿದ್ದಲ್ಲಿ ತಿಳಿಸುವುದು. ಭರ್ತಿ ಮಾಡಿದ ನಮೂನೆಗಳನ್ನು 31.08.2017 ರೊಳಗಾಗಿ ಎಲ್ಲಾ 412 ಕಾಲೇಜುಗಳಲ್ಲಿನ IQAC ಯಲ್ಲಿ ಸಂರಕ್ಷಿಸಿ ಈ ಮೌಲ್ಯಮಾಪನದ ಬಗ್ಗೆ ಸಂಕ್ಷಿಪ್ತವಾದ ವರದಿಯನ್ನು ಈ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ಆಯುಕ್ತರು
16/8/17

**ಅಡಕ:** ಶೈಕ್ಷಣಿಕ ಮೌಲ್ಯಮಾಪನದ ನಮೂನೆ

*ಇವರಿಗೆ:*

1. *ನಿರ್ದೇಶಕರು, ಕಾಶಿಇ, ಮಾಹಿತಿಗಾಗಿ.*
2. *ಹೆಚ್ಚುವರಿ ನಿರ್ದೇಶಕರು, ಕಾಶಿಇ– ಮಾಹಿತಿಗಾಗಿ.*
3. *ಜಂಟಿ ನಿರ್ದೇಶಕರು, ಶೈಕ್ಷಣಿಕ, ಕಾಶಿಇ, ಬೆಂಗಳೂರು, ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.*
4. *ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳಿಗೆ– ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.*
5. *ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, & ಕಲಬುರ್ಗಿ– ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.*
6. *ಕಛೇರಿ ಪ್ರತಿ.*